ಶ್ರೀ ಅಜೀಜ್ ಸೇಠ್ (ಸಾರಿಗೆ ಮತ್ತು ವರ್ಕ್ಸ್ ಸಚಿವರು) :

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ರಾಷ್ಟ್ರೀಕರಣವಾಗಿರುವ ವಲಯದಲ್ಲಿ ಗ್ರಾಮಾಂತರ ಜನತೆಗೆ ಸಮರ್ಪಕ ಸಾರಿಗೆ ಸೇವೆಯನ್ನು ಕಲ್ಪಿಸಿದೆ.

ಶಿಕ್ಷಕರ ಪ್ರತಿನಿಧಿಗಳಿಗೆ ವಿಧಾನ ಪರಿಷತ್ತಿನಲ್ಲಿ ಪ್ರಾತಿನಿಧ್ಯ ನೀಡುವ ಬಗ್ಗೆ

1720 (ಎ). ಶ್ರೀ ವೈ.ಎಂ. ವೀರಣ್ಣ (ದಾವಣಗೆರೆ) : ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರಾಥಮಿಕ, ಮಾಧ್ಯಮಿಕ, ಸೆಕೆಂಡರಿ ಶಾಲೆಗಳಿಗೆ ಅಗತ್ಯ ಶಿಕ್ಷಕರ ನೇಮಕ, ಕಾಲೇಜು ಶಿಕ್ಷಕರಿಗೆ ಯುಜಿಸಿ ವೇತನ (ವಿಧಾನ ಪರಿಷತ್ತಿನಲ್ಲಿ ಪ್ರಾಥಮಿಕ ಶಿಕ್ಷಕರ ಪ್ರತಿನಿಧಿಗಳಿಗೆ ಪ್ರಾತಿನಿಧ್ಯ ಮೊದಲಾದ ಮೂಲಭೂತ ಆವಶ್ಯಕತೆಗಳ ಪೂರೈಕೆಗೆ ಗಮನ ನೀಡುವುದೆ ;

ಆ) ಹಾಗಿದ್ದಲ್ಲಿ, ಕೈಗೊಂಡಿರುವ ಕ್ರಮವೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ರಾಜ್ಯ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ದಿನಾಂಕ 1-3-90 ರಿಂದ 31-12-90ರ ವರೆಗೆ 4,634 ಹಾಗೂ ದಿನಾಂಕ 1-1-91 ರಿಂದ 31-5-91ರ ವರೆಗೆ 14,080 ಯೋಜನೇತರ ಹುದ್ದೆಗಳು ಖಾಲಿ ಇರುತ್ತವೆ. ಇದಲ್ಲದೆ ಕಪ್ಪು ಹಲಗೆ ಯೋಜನೆಯಡಿಯಲ್ಲಿ 3ನೇ ಮತ್ತು 4ನೇ ಹಂತಗಳನ್ನೊಳಗೊಂಡಂತೆ ಒಟ್ಟು 7309 ಯೋಜನಾ ಹುದ್ದೆಗಳು ಖಾಲಿ ಇರುತ್ತವೆ. ರಾಜ್ಯದಲ್ಲಿನ 1264 ಪ್ರೌಢ ಶಾಲಾ ಸಹಾಯಕ ಶಿಕ್ಷಕರ ಹುದ್ದೆಗಳು ದಿನಾಂಕ 31-12-91ರ ವರೆಗೆ ಖಾಲಿ ಇರುತ್ತವೆ.

ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಿಗೆ ಯುಜಿಸಿ ವೇತನ ನೀಡುತ್ತಿಲ್ಲ. ಸರ್ಕಾರಿ ಆದೇಶ ಸಂಖ್ಯೆ : ಇಡಿ 88 ಯುಎಸ್‌ಪಿ 88 ದಿನಾಂಕ 30-8-90ರ ಪ್ರಕಾರ ದಿನಾಂಕ 1-1-88 ರಿಂದ ಯುಜಿಸಿ ವೇತನವನ್ನು ಪ್ರಥಮ ದರ್ಜೆ ಕಾಲೇಜು ಉಪನ್ಯಾಸಕರಿಗೆ ನೀಡಲಾಗುತ್ತಿದೆ.

ವಿಧಾನ ಪರಿಷತ್ತಿನಲ್ಲಿ ಪ್ರಾಥಮಿಕ ಶಿಕ್ಷಕರ ಪ್ರತಿನಿಧಿಗಳಿಗೆ ಪ್ರಾತಿನಿಧ್ಯ ನೀಡುವ ಪ್ರಸ್ತಾವನೆಯು ಇಲ್ಲವಾಗಿದ್ದು, ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಸರ್ಕಾರದ ಆದೇಶ ಸಂಖ್ಯೆ : ಇಡಿ 131 ಪಿಎಂಎಸ್ 91 ದಿನಾಂಕ 8-11-91 ರಲ್ಲಿ ಆರ್ಥಿಕ ಮಿತವ್ಯಯವನ್ನು ಸಡಿಲಿಸಿ ಯೋಜನೇತರ ಬಾಬ್ತು ದಿನಾಂಕ 1-3-90 ರಿಂದ 31-12-91ರ ವರೆಗೆ ಖಾಲಿ ಇರುವ 4634 ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಲಾಗಿದೆ. ಉಳಿದ 1680 ಹುದ್ದೆಗಳಿಗೂ ಸಹ ಆದೇಶ ಸಂಖ್ಯೆ : ಇಡಿ 131 ಪಿಎಂಎಸ್ 91 ದಿನಾಂಕ 27-2-92 ರಲ್ಲಿ ಮಿತವ್ಯಯ ಆದೇಶವನ್ನು ಸಡಿಲಿಸಿ ಭರ್ತಿ ಮಾಡಲು ಅನುಮತಿ ನೀಡಿದೆ.

ಕಪ್ಪು ಹಲಗೆ ಕಾರ್ಯಾಚರಣೆಯ ಯೋಜನೆಯ 3ನೇ ಹಂತದ ಅಡಿಯಲ್ಲಿ ಮಂಜೂರಾದ 2712 ಹುದ್ದೆಗಳನ್ನು ಮಿತವ್ಯಯ ಸಡಿಲಿಸಿ ಯೋಜನೇತರ ಹುದ್ದೆಗಳ

ಪೈಕಿ ಹೊಂದಾಣಿಕೆ ಮೂಲಕ (ಸೆಟ್ ಆಫ್) ನೇಮಕಾತಿ ಮಾಡಿಕೊಳ್ಳಲು ಹಾಗೂ ಕ.ಹೆ. 4ನೇ ಹಂತದ ಅಡಿಯಲ್ಲಿ ಮಂಜೂರಾದ 4597 ಹುದ್ದೆಗಳಿಗೂ ಸಹ ಆದೇಶ ಸಂಖ್ಯೆ : ಇಡಿ 181 ಪಿಎಂಎಸ್ 91 ದಿನಾಂಕ 17-1-92 ರಲ್ಲಿ ಸರ್ಕಾರವು ಅನುಮತಿ ನೀಡಿದೆ.

ಅಧಿಸೂಚನೆ ಸಂಖ್ಯೆ : ಇಡಿ 88 ಪಿಎಂಎಸ್ 91 ದಿನಾಂಕ 21-10-91 ರಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಬಗ್ಗೆ ನಿಯಮಾವಳಿಗಳನ್ನು ರೂಪಿಸಿದ್ದು ನೇರ ನೇಮಕಾತಿ ಮಾಡಿಕೊಳ್ಳಲು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳಿಂದ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಪಡೆದು ಕ್ರಮ ಕೈಗೊಳ್ಳಲಾಗುವುದು.

ದಿನಾಂಕ 31-12-91ರ ವರೆಗೆ ಖಾಲಿ ಇರುವ 1234 ಪ್ರೌಢ ಶಾಲಾ ಸಹಾಯಕ ಶಿಕ್ಷಕರ ಹುದ್ದೆ 505 ಹುದ್ದೆಗಳನ್ನು (ಶೇಕಡ 40) ಮಿತವೇತನ ಪದವೀಧರರಿಂದಲೂ ಹಾಗೂ ಉಳಿದ 759 ಖಾಲಿ ಹುದ್ದೆಗಳನ್ನು ಉದ್ಯೋಗ ವಿನಿಮಯ ಕೇಂದ್ರ ಅರ್ಹ ಅಭ್ಯರ್ಥಿಗಳ ಮೂಲಕ ನೇರ ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ರೈತರ ಸಾಲದ ಬಡ್ಡಿ ರಿಯಾಯಿತಿ ಕುರಿತು

1722. ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರೈತರ ಸಾಲದ ಬಡ್ಡಿಯನ್ನು ರಿಯಾಯಿತಿ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ ;

ಆ) ಇದ್ದಲ್ಲಿ ಯಾವಾಗ ಯಾವ ಆಧಾರದಲ್ಲಿ ಮಾಡಲಾಗುವುದು ?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇಂಧನ ಉಳಿತಾಯ ಸಪ್ತಾಹದ ಕುರಿತು.

1776. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಇಂಧನ (ಡೀಸೆಲ್) ಉಳಿತಾಯ ಸಪ್ತಾಹದಿಂದ ಉಳಿಸಿದ ಇಂಧನದ ಪ್ರಮಾಣವೆಷ್ಟು ;

ಆ) ಇಂಧನ ಉಳಿತಾಯ ಸಪ್ತಾಹದ ಬಗ್ಗೆ ವೆಚ್ಚ ಮಾಡಿದ ಮೊತ್ತವೆಷ್ಟು (ಜಿಲ್ಲಾವಾರು ವಿವರ ನೀಡುವುದು) ?